ಖಂಡಿತವಾಗಿಯೂ ನಿನ್ನಲ್ಲಿ ಅಲ್ಲಾಹು ಪ್ರೀತಿಸುವ ಎರಡು ಗುಣಲಕ್ಷಣಗಳಿವೆ: 'ಹಿಲ್ಮ್' (ಸಹನಶೀಲತೆ), ಮತ್ತು 'ಅನಾತ್' (ತಾಳ್ಮೆ ಮತ್ತು ನಿಧಾನವಾಗಿ ಯೋಚಿಸಿ ಕಾರ್ಯನಿರ್ವಹಿಸುವುದು)

ಇಬ್ನ್ ಅಬ್ಬಾಸ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅಬ್ದುಲ್ ಖೈಸ್ ಗೋತ್ರದ ಅಶಜ್ಜ್ ರಿಗೆ ಹೇಳಿದರು: "ಖಂಡಿತವಾಗಿಯೂ ನಿನ್ನಲ್ಲಿ ಅಲ್ಲಾಹು ಪ್ರೀತಿಸುವ ಎರಡು ಗುಣಲಕ್ಷಣಗಳಿವೆ: 'ಹಿಲ್ಮ್' (ಸಹನಶೀಲತೆ), ಮತ್ತು 'ಅನಾತ್' (ತಾಳ್ಮೆ ಮತ್ತು ನಿಧಾನವಾಗಿ
ಯೋಚಿಸಿ ಕಾರ್ಯನಿರ್ವಹಿಸುವುದು)". [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅಬ್ದುಲ್ ಖೈಸ್ ಗೋತ್ರದ ನಾಯಕ, ಅಲ್-ಮುಂದಿರ್ ಇಬ್ನ್ ಆಇದ್ ಅಶಜ್ಜ್ ರಿಗೆ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಹೇಳಿದರು: ಖಂಡಿತವಾಗಿಯೂ ನಿನ್ನಲ್ಲಿ ಅಲ್ಲಾಹು ಪ್ರೀತಿಸುವ ಎರಡು ಗುಣಲಕ್ಷಣಗಳಿವೆ, ಅವು: ಬುದ್ಧಿವಂತಿಕೆ ಮತ್ತು ದೃಢತೆ, ಗಾಂಭೀರ್ಯ ಹಾಗೂ ಆತುರಪಡದಿರುವುದು.

http://www.sunnah.global/hadeeth/kn/show/5800